ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕಗ್ಗಲೀಪುರ ಗ್ರಾಮ ಪಂಚಾಯತಿ
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
Email : kaggalipuragp@gmail.com Phone : +91 89519 81991

ಸಂಖ್ಯೆ:ಕ.ಗ್ರಾ.ಪಂ/ಹಿಂಬರಹ/2024-25/ 236 ದಿನಾಂಕ: 13-02-2025

## -:ನಿರಾಕ್ಷೇಪಣಾ ಪತ್ರ:-

ವಿಷಯ: ಕಗ್ಗಲೀಪುರ ಗ್ರಾಮದ ಸರ್ವೆ ನಂ. 230/5ರಲ್ಲಿ 0ಎ-28ಗುಂ, ಸರ್ವೆ ನಂ.232ರಲ್ಲಿ 5ಎ-35ಗುಂ ಒಟ್ಟು 6ಎ-23ಗುಂ ವಿಸ್ತೀರ್ಣದ ಆಸ್ತಿಯಲ್ಲಿ ಕುಡಿಯುವ ನೀರು ಸರಬರಾಜುಗೆ ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.

ಉಲ್ಲೇಖ: 1) ಶ್ರೀ ಯಾದವ್ ಚಂದ್ರಶೇಖರ್ ಮತ್ತು ಇತರರು ಪಾಲುದಾರರು M/s YC Orchid Homes LLP, ಬೆಂಗಳೂರು ರವರ ಮನವಿ ಪತ್ರ. ದಿನಾಂಕ: 12-02-2025ರಂತೆ.
2) ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ/15/ಇ-ಆಡಳಿತ/2022, ಬೆಂಗಳೂರು. ದಿನಾಂಕ: 01-07-2022.

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲೀಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಗ್ಗಲೀಪುರ ಗ್ರಾಮದ ಸರ್ವೆ ನಂ. 230/5ರಲ್ಲಿ 0ಎ-28ಗುಂ, ಸರ್ವೆ ನಂ.232ರಲ್ಲಿ 5ಎ-35ಗುಂ ಒಟ್ಟು 6ಎ-23ಗುಂ ವಿಸ್ತೀರ್ಣದ ಜಮೀನುಗಳು ವಾಸದ ಉದ್ದೇಶಕ್ಕೆ ಅನುಮೋದನ ಸಲುವಾಗಿ ತಮ್ಮಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ ಕೊಡಲು ಕೋರಿ, ಅರ್ಜಿ ಸಲ್ಲಿಸಿ ನಿರಾಕ್ಷೇಪಣಾ ಪತ್ರ ಕೋರಿರುವುದು ಸರಿಯಷ್ಟೆ.

ಮುಂದುವರೆದೂ,... ಅದರಂತೆ ಈ ಮೇಲ್ಕಂಡ ಜಮೀನನ್ನು ಜಿಲ್ಲಾಧಿಕಾರಿಗಳ ಆದೇಶದಂತೆ ಯೋಜನಾ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ವಸತಿ ಬಡಾವಣೆ/ಸಮುಚ್ಚಯಕ್ಕೆ ನಿರ್ಮಾಣದ ನಂತರ ಪಂಚಾಯಿತಿಗೆ ಅಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಂಡು ಕುಡಿಯುವ ನೀರು ಪೂರೈಸಲಾಗುವುದು ಎಂದು ದೃಢೀಕರಿಸುತ್ತಾ ಉಲ್ಲೇಖ (2)ರಂತೆ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

**ಷರತ್ತುಗಳು:**

1) ಕಗ್ಗಲೀಪುರ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಮತ್ತು ಅದರಡಿ ನಿಯಮಿತವಾದ ನಿಯಮ ಷರತ್ತುಗಳು ಮತ್ತು ಪ್ರಕ್ರಿಯೆಗಳಿಗೆ ಒಳಪಟ್ಟಿರುತ್ತದೆ.

2) ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ)ಅಧಿನಿಯಮ 2011 ಮತ್ತು ನಿಯಮಾವಳಿ 2012ರ ಆದೇಶಕ್ಕೆ ಒಳಪಟ್ಟಿರುತ್ತದೆ.

3) ಸರ್ಕಾರದ ಆದೇಶ ಸಂಖ್ಯೆ: ಸನೀಇ09 ಅಜಅ2015 ಬೆಂಗಳೂರು ದಿನಾಂಕ: 22-04-2017ರ ಆದೇಶಕ್ಕೆ ಒಳಪಟ್ಟಿರುತ್ತದೆ.

4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ48 ಗ್ರಾನೀಸ(1)2014, ಬೆಂಗಳೂರು ದಿನಾಂಕ: 04-01-2018ರ ಆದೇಶದ ಕ್ರಮಗಳನ್ನು ಪಾಲಿಸುವುದು ಕಡ್ಡಾಯವಾಗಿದೆ.

5) ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಗ್ರಾಮ ಪಂಚಾಯತ್ ಗಳ ನಿಯಂತ್ರಣ)

(ನಿರಸನ) ನಿಯಮಗಳು 2015ರ ಕಡ್ಡಾಯ ಪಾಲನೆಯಾಗಿರಬೇಕು.

6) ಕೊಳವೆ ಬಾವಿಗೆ ಅಗತ್ಯ ಸಾಮಾಗ್ರಿಗಳನ್ನು ಮತ್ತು ನಿರ್ವಹಣೆಯ ಸಂಪೂರ್ಣ ಹೊಣೆಗಾರಿಕೆ ನಿಮ್ಮದಾಗಿರುತ್ತದೆ.

7) ಸರ್ಕಾರದ ಎಲ್ಲಾ ನಿಯಮಗಳು, ನಿರ್ಣಯಗಳು, ಕಾನೂನುಗಳಿಗೆ ಮತ್ತು ಸುತ್ತೋಲೆಗಳಿಗೆ ಒಳಪಟ್ಟಿರುತ್ತದೆ.

8) ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ (BESCOM ರವರ) ಅನುಮತಿ/NOC ಪಡೆದು ವಿಧಿಸುವ ಶುಲ್ಕ ತೆರಿಗೆ, ಇತರೆ ಶುಲ್ಕ ಪಾವತಿಸುವ ಹೊಣೆಗಾರಿಕೆ ನಿಮ್ಮದಾಗಿರುತ್ತದೆ.

9) ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳು ಪಂಚಾಯತ್ ಗೆ ಸದರಿ ವಿಷಯಗಳ ಬಗ್ಗೆ ಮಾಹಿತಿಯನ್ನು ಕಾಲಕಾಲಕ್ಕೆ ನೀಡ ತಕ್ಕದ್ದು.

10) ಖಾಸಗಿ ಉದ್ದೇಶಕ್ಕೆ ಬಳಸಬಾರದು ಮತ್ತು ಸದರಿ ಆಸ್ತಿಗೆ ಬಿಟ್ಟು ಬೇರೆ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಅಥವಾ ವಸತಿಗಳಿಗೆ ನೀರು ಸರಬರಾಜು ಆಗಬಾರದು.

11) ನಿಗದಿತ ಉದ್ದೇಶವನ್ನು ಬಿಟ್ಟು ಬೇರೆ ಯಾವುದೇ ಉದ್ದೇಶಕ್ಕೆ ಪಂಚಾಯತ್ ನ ಅನುಮತಿ ಇಲ್ಲದೇ ಬಳಸಬಾರದು.

15) ಸಾರ್ವಜನಿಕ ಉದ್ದೇಶಕ್ಕೆ ಮಾತ್ರ ಬಳಸ ತಕ್ಕದ್ದು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕಗ್ಗಲೀಪುರ ಗ್ರಾಮ ಪಂಚಾಯಿತಿ
ಬೆಂಗಳೂರು ದಕ್ಷಿಣ, ಬೆಂಗಳೂರು ನಗರ

**ರವರಿಗೆ,**
ಮಾನ್ಯ ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ ಸದಸ್ಯ ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ,
ಕನಕಪುರ.